ವಿಷಯ : ವಯಸ್ಕರ ಶಿಕ್ಷಣದ ಪ್ರಗತಿ.

425

ಶ್ರೀ ಬಿ.ಎಂ.ಇದಿನಬ್ಬ (ಉಳ್ಳಾಲ) : ಮಾನ್ಯ ವಯಸ್ಕರ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಾಕ್ಷರತಾ ಆಂದೋಲನಾ ಬಂದ ಬಳಿಕ ವಯಸ್ಕರ ಶಿಕ್ಷಣ ಕಾರ್ಯಕ್ರಮ ಕುಂಠಿತಗೊಂಡಿದೆಯಲ್ಲವೆ?

ಆ) ವಯಸ್ಕರ ಶಿಕ್ಷಣದ ಕಾರ್ಯಕ್ರಮಗಳು ಈಗ ಏನಾದರೂ ಇದೆಯೇ? ಇದ್ದರೆ ರಾಜ್ಯದಲ್ಲಿ ಎಲ್ಲೆಲ್ಲಿವೆ? ಹಾಗೂ ಯಾವ ಮಟ್ಟದಲ್ಲಿ ಎಂಬ ವಿವರ ನೀಡುವುದು?

ಇ) ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ರಾಜ್ಯದಲ್ಲಿ ಪುನಶ್ಚೇತನಗೊಲಿಸಲು ಸರ್ಕಾರದ ಯಾವ ಕ್ರಮ ಕೈಗೊಳ್ಳಲಿದೆ.

ಶ್ರೀ ಪ್ರಭಾಕರ್ ಎಸ್. ರಾಣೆ (ವಯಸ್ಕರ ಶಿಕ್ಷಣ ಸಚಿವರು) :

ಅ) ಸಂಪೂರ್ಣ ಸಾಕ್ಷರತಾ ಆಂದೋಲನವನ್ನು ರಾಜ್ಯದ ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ಚುರುಕುಗೊಳಿಸುವಂತಹುದಾಗಿದೆ.

ಆ) ಹಿಂದಿನ ವಯಸ್ಕರ ಶಿಕ್ಷಣ ಕಾರ್ಯಕ್ರಮವು ಫಲಕಾರಿಯಾಗಿಲ್ಲದಿರುವುದರಿಂದ ಸಾಕ್ಷರತಾ ಆಂದೋಲನವನ್ನು ಪ್ರಾರಂಭಿಸಲಾಯಿತು. ಈ ದಿಸೆಯಿಂದಾಗಿ ರಾಜ್ಯದ 9 ಜಿಲ್ಲೆಗಳಾದ ದಕ್ಷಿಣ ಕನ್ನಡ, ಬಿಜಾಪುರ, ಮಂಡ್ಯ ರಾಯಚೂರು, ತುಮಕೂರು, ಶಿವಮೊಗ್ಗ, ಬೀದರ್, ಮೈಸೂರು ಹಾಗೂ ದಾರವಾಡಗಳಲ್ಲಿ ಅನುಷ್ಠಾನದಲ್ಲಿದೆ. ಇನ್ನೆರಡು ವರ್ಷಗಳಾದ 1993-94 , 94-95 ರಲ್ಲಿ ಇಡೀ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಸಾಕ್ಷರತಾ ಆಂದೋಲನವನ್ನು ಹಮ್ಮಿಕೊಳ್ಳಲಾಗುವುದು. 93-94 ನೇ ಸಾಲಿನಲ್ಲಿ ಈ ಕೆಳಕಂಡ ಜಿಲ್ಲೆಗಳಲ್ಲಿ ಸಾಕ್ಷರತಾ ಆಂದೋಲನವನ್ನು ಹಮ್ಮಿಕೊಳ್ಳಲಾಗುವುದು. ಬೆಂಗಳೂರು ಗ್ರಾಮಾಂತರ, ಬೆಳಗಾಂ, ಚಿಕ್ಕಮಗಳೂರು, ಗುಲ್ಬರ್ಗಾ, ಕೊಡಗು, ಉತ್ತರ ಕನ್ನಡ.

1994-95 ನೇ ಸಾಲಿನಲ್ಲಿ ಈ ಕೆಳಕಂಡ ಜಿಲ್ಲೆಗಳಲ್ಲಿ ಸಾಕ್ಷರತಾ ಆಂದೋಲನವನ್ನು ಹಮ್ಮಿಕೊಳ್ಳಲಾಗುವುದು. ಬೆಂಗಳೂರು (ನಗರ), ಬಳ್ಳಾರಿ, ಚಿತ್ರದುರ್ಗ, ಹಾಸನ, ಕೊಲಾರ, ಜಿಲ್ಲಾ ಸಾಕ್ಷತರಾ ಸಮಿತಿಗಳಿಂದ ಅನುಷ್ಠಾನಗೊಳ್ಳುತ್ತಿರುವ ಸಂಪೂರ್ಣ ಸಾಕ್ಷರತಾ ಆಂದೋಲನದ ಜೊತೆಗೆ ಕೆಲ ಸ್ವಯಂಸೇವಾ ಸಂಸ್ಥೆಗಳೂ ಸಹ ಕೇಂದ್ರ ಸರ್ಕಾರದ ಆರ್ಥಿಕ ನೆರವಿನೊಂದಿಗೆ ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ನಡೆಸುತ್ತಿವೆ.

ಇ) ಈ ಹಿನ್ನೆಲೆಯಲ್ಲಿ ಮೇಲಿನಂತೆ ಸರ್ಕಾರವು ಕ್ರಮ ಕೈಗೊಂಡಿರುವುದು . ಮುಂದೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : ಪ್ರೌಢ ಶಾಲಾ ಶಿಕ್ಷಕರ ಹುದ್ದೆಗಳ ಭರ್ತಿ.

358 ಎ

ಶ್ರೀ ಬಿ.ಹಂಪನಗೌಡ (ಸಿಂಧನೂರು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಸರ್ಕಾರಿ ಪ್ರೌಢಶಾಲೆಗಳಲ್ಲಿ ಮಂಜೂರಾದ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಎಷ್ಟು ಹುದ್ದೆಗಳನ್ನು ಸರ್ಕಾರವು ಭರ್ತಿ ಮಾಡಿದೆ ಮತ್ತು ಇನ್ನು ಎಷ್ಟು ಹುದ್ದೆಗಳನ್ನು ಭರ್ತಿ ಮಾಡಬೇಕಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು) ?

ಶ್ರೀ ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಆ) 10208

ಆ) 1. ಭರ್ತಿಯಾದ ಹುದ್ದೆಗಳು -- 8803
2. ಭರ್ತಿ ಮಾಡಬೇಕಾದ ಹುದ್ದೆಗಳು - 1405

ಜಿಲ್ಲಾವಾರು ಖಾಲಿ ಹುದ್ದೆಗಳ ವಿವರ ಈ ಕೆಳಕಂಡಂತಿದೆ. ತಾಲ್ಲೂಕುವಾರ ಮಾಹಿತಿ ನಂತರ ಒದಗಿಸಲಾಗುವುದು.

1. ಬೆಂಗಳೂರು ಉತ್ತರ	-	08
2. ಬೆಂಗಳೂರು ದಕ್ಷಿಣ	-	22
3. ಬೆಂಗಳೂರು ಗ್ರಾಮಾಂತರ	-	63
4. ತುಮಕೂರು	-	92
5. ಕೋಲಾರ	-	151
6. ಶಿವಮೊಗ್ಗ	-	102
7. ಚಿತ್ರದುರ್ಗ	-	41
8. ಮೈಸೂರು	-	26
9. ಮಂಡ್ಯ	-	38
10. ಕೊಡಗು	-	37
11. ದಕ್ಷಿಣ ಕನ್ನಡ	-	211
12. ಹಾಸನ	-	152
13. ಚಿಕ್ಕಮಗಳೂರು	-	73
14. ಗುಲ್ಬರ್ಗ	-	94
15. ರಾಯಚೂರು	-	76
16. ಬೀದರ್	-	81
17. ಬಳ್ಳಾರಿ	-	15
18. ಬೆಳಗಾಂ	-	16
19. ಬಿಜಾಪುರ	-	15
20. ಉತ್ತರ ಕನ್ನಡ	-	39
21. ಧಾರವಾಡ	-	53
ಒಟ್ಟು	-	1405

ವಿಷಯ : ದಡೆಸೂಗೂರು ಗ್ರಾಮದ ಶೀಥಲಿ ಕೇಂದ್ರದ ಬಗ್ಗೆ.

359

ಶ್ರೀ ಬಿ.ಹಂಪನಗೌಡ (ಸಿಂಧನೂರು) : ಮಾನ್ಯ ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಿಂಧನೂರು ತಾಲೂಕಿನ ದಡೆಸೂಗೂರು ಗ್ರಾಮದ ಶೀಥಲಿ ಕೇಂದ್ರ ಯೋಜನೆ ಯಾವ ಹಂತದಲ್ಲಿದೆ?